ಸಾಕ್ಷಿಗೆ ದಿನಾಂಕ 22-08-2026 ರಂದು ಪ್ರಮಾಣ ವಚನ ನೀಡಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ

ಈ ಅರ್ಜಿಗೆ ಸಂಬಂದಿಸಿದಂತೆ ಸಾಕ್ಷಿ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

| | |
|---|---|
| ನಿಪಿಃ 4 | ವಂಶವೃಕ್ಷ ದೃಢೀಕರಣ ಪತ್ರ |
| ನಿಪಿಃ 5 | 1 ಆಧಾರ್ ಕಾರ್ಡ್ ಪ್ರತಿಯನ್ನು ಮೂಲ ದಾಖಲೆ ನೋಡಿ ಗುರುತಿಸಲಾಯಿತು |
| ನಿಪಿಃ 6 ಮತ್ತು 7 | ಎರಡು ಮರಣ ಪ್ರಮಾಣ ಪತ್ರಗಳನ್ನು ಮೂಲ ದಾಖಲೆ ನೋಡಿ ಗುರುತಿಸಲಾಯಿತು |
| ನಿಪಿಃ 8 | ಪಹಣಿ ಪತ್ರಿಕೆ |

ಅದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟಿ ಸವಾಲುಃ **1** ಮತ್ತು **2** ನೇ ಎದುರುದಾರರ ಪರ ವಕೀಲರಿಂದಃ

ನಮ್ಮ ಊರಿನಲ್ಲಿಯೇ ನಮ್ಮ ಮನೆಯ ಹತ್ತಿರ ನನ್ನ ತಂದೆಯ ಅಂತ್ಯ ಸಂಸ್ಕಾರ ಆಗಿರುತ್ತದೆ ನನ್ನ ತಂದೆ ಮೃತ ಪಟ್ಟಿರುವ ಬಗ್ಗೆ ನಾನೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ನನ್ನ ದೊಡ್ಡಪ್ಪ ನವರು ಇದಕ್ಕೂ ಮುಂಚೆ ಮಾಹಿತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಇದರ ಬಗ್ಗೆ 1 ಮತ್ತು 2 ನೇ ಪ್ರತಿವಾದಿಯರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೋಸ್ಕರ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಸಾ.ಓ.ಹೇ.ಸ.ಒ**

ಸಹಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
**ಸಿದ್ದಾಪುರ**